# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 195 | Pages. 2 | Date: 12-06-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 195 - ಪುಟಗಳು : 2 - 12 ಜೂನ್ 2025 ಗುರುವಾರ Ph: 8762954248 ದರ : ₹1


# ಸದಸ್ಯತ್ವ ಅನರ್ಹ ಅರ್ಜಿ ತಿರಸ್ಕರಿಸಿದ ನ್ಯಾಯಾಲಯ

## ಅರಸೀಕೆರೆ ನಗರಸಭೆಯಲ್ಲಿ ಜೆಡಿಎಸ್‌ಗೆ ಹಿನ್ನಡೆ | ಗೆದ್ದು ಬೀಗಿದ ಸಮೀವುಲ್ಲಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಸದಾ ರಾಜಕೀಯವನ್ನೇ ಉಸಿರಾಡುವ ಅರಸೀಕೆರೆ ನಗರಸಭೆ ಮತ್ತೊಮ್ಮೆ ಸುದ್ದಿಯಾಗಿದ್ದು ವಿಪ್ ಉಲ್ಲಂಘಿಸಿದ ಆರೋಪದಡಿ ದಾಖಲಾಗಿದ್ದ ಅರ್ಜಿಯನ್ನು ಜಿಲ್ಲಾಧಿಕಾರಿ ನ್ಯಾಯಾಲಯ ವಜಾ ಮಾಡಿದ್ದು ಜೆಡಿಎಸ್‌ಗೆ ಹಿನ್ನಡೆಯಾಗಿದೆ.

ಆ ಮೂಲಕ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರ ಕೈ ಮೇಲಾಗಿದ್ದು ರಾಜಕೀಯ ವಾಕ್ಸಮರಕ್ಕೆ ವೇದಿಕೆ ಸೃಷ್ಟಿಸಿದಂತಾಗಿದೆ. ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸುಜಾತ ರಮೇಶ್ ವಿರುದ್ಧ ಮತ ಚಲಾಯಿಸಿದ 13 ಸದಸ್ಯರ ಸದಸ್ಯತ್ವ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಜಾ ಆಗುವ ಮೂಲಕ 10 ತಿಂಗಳ ಕಾನೂನು ಹೋರಾಟಕ್ಕೆ ಇತಿಶ್ರೀ ಬಿದ್ದಿದೆ.

2024ರ ಆ. 22 ರಂದು ನಡೆದಿದ್ದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಗೆದ್ದಿದ್ದರೂ ಪಕ್ಷ ಸೂಚಿಸಿದವರಿಗೆ ಮತ ಹಾಕದೆ ವಿಪ್ ಉಲ್ಲಂಘಿಸಿದ ಆರೋಪದಡಿ ಅಧ್ಯಕ್ಷ ಸ್ಥಾನ ಆಕಾಂಕ್ಷಿ ಸುಜಾತಾ ರಮೇಶ್ ಅವರು ಪಕ್ಷದ 13 ಸದಸ್ಯರ ಸದಸ್ಯತ್ವ ರದ್ದುಪಡಿಸಬೇಕೆಂದು ದೂರು ಸಲ್ಲಿಸಿದ್ದರು. ಈ ಸಂಬಂಧ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು. ಜೂ. 10ರ ಮಂಗಳವಾರ ಅಂತಿಮ ತೀರ್ಪು ಪ್ರಕಟಿಸಿದ ಜಿಲ್ಲಾ ದಂಡಾಧಿಕಾರಿ ಸಿ. ಸತ್ಯಭಾಮ ಅವರು, ವಿಪ್ ಜಾರಿ ಸಂದರ್ಭದಲ್ಲಿ ಸುಜಾತಾ ರಮೇಶ್ ಅವರು ಕಾನೂನು ಪಾಲಿಸಿಲ್ಲ. ವಿಪ್ ಅರ್ಜಿಯನ್ನು ಚುನಾವಣೆಗಿಂತ ಐದು ದಿನ ಮೊದಲು ನೀಡಬೇಕು. ಆದರೆ ನಾಲ್ಕು ದಿನ ಇರುವಾಗ ಜಾರಿಗೊಳಿಸಲಾಗಿದೆ. ಜೊತೆಗೆ ಎಂ. ಸಮೀವುಲ್ಲಾ ಹಾಗೂ ಇತರರು ತಾವು ಜೆಡಿಎಸ್ ಪಕ್ಷದಲ್ಲೇ ಇದ್ದು, ಸಿ.ಎಂ. ಇಬ್ರಾಹಿಂ ಅವರ ಬಣದಲ್ಲಿ ಗುರುತಿಸಿಕೊಂಡಿರುವುದಾಗಿ ತಿಳಿಸಿದ್ದಾರೆ. ಹೀಗಾಗಿ ಸುಜಾತಾ ರಮೇಶ್ ಅವರ ಅರ್ಜಿ ವಜಾಗೊಳಿಸಲಾಗಿದೆ ಎಂದು ತೀರ್ಪು ಪ್ರಕಟಿಸಲಾಗಿದೆ.




“ಯಾರದೋ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ತೀರ್ಪು ನೀಡಲಾಗಿದೆ. ಜಿಲ್ಲಾಧಿಕಾರಿ ನ್ಯಾಯಾಲಯ ತೀರ್ಪು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರುತ್ತೇವೆ. ಸಿ.ಎಂ. ಇಬ್ರಾಹಿಂ ಪಕ್ಷದಲ್ಲೇ ಇಲ್ಲ. ಅವರ ಲೆಟರ್ ಹೆಡ್ ಅನ್ನು ನ್ಯಾಯಾಲಯ ಮಾನ್ಯ ಮಾಡಿರುವುದು ಸರಿಯಲ್ಲ.

– ಸುಜಾತ ರಮೇಶ್, ನಗರಸಭೆ ಸದಸ್ಯೆ



**ಅಭಿವೃದ್ಧಿ ಗೌಣ :** ನಗರಸಭೆ ಅಭಿವೃದ್ಧಿ ಕೆಲಸ-ಕಾರ್ಯಗಳಿಂದ ನಗರದ ಜನತೆಯ ಗಮನ ಸೆಳೆಯುವ ಬದಲು ಐದಾರು ವರ್ಷಗಳಿಂದ ಒಂದಲ್ಲ ಒಂದು ಕಾರಣಕ್ಕೆ ಕೋರ್ಟ್, ಕಚೇರಿಯಲ್ಲೇ ಆಡಳಿತ-ಪ್ರತಿ ಪಕ್ಷಗಳ ಸದಸ್ಯರು ಕಾಲಹರಣ ಮಾಡುತ್ತಿರುವುದರಿಂದ ನಗರ ವ್ಯಾಪ್ತಿಯ ಅಭಿವೃದ್ಧಿಗೆ ಗ್ರಹಣ ಹಿಡಿದಿದೆ.

“ದೇಶವನ್ನು ಮುನ್ನಡೆಸುತ್ತಿರುವುದು ಚುನಾಯಿತ ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಅಲ್ಲ ಸಂವಿಧಾನ ಎಂಬುದು ಸಾಬೀತಾಯಿತು. ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂಬುದನ್ನು ಜನಪ್ರತಿನಿಧಿಗಳು ಇನ್ನಾದರೂ ಅರಿಯಬೇಕು.



– ಎಂ. ಸಮೀವುಲ್ಲಾ, ನಗರಸಭೆ ಅಧ್ಯಕ್ಷ

ಆಡಳಿತಾವಧಿಯ ಉದ್ದಕ್ಕೂ ಜಿಲ್ಲಾಧಿಕಾರಿ ನ್ಯಾಯಾಲಯ ಮಾತ್ರವಲ್ಲದೆ ಹೈಕೋರ್ಟ್, ಸುಪ್ರೀಂಕೋರ್ಟ್ ಅಂಗಳದಲ್ಲೂ ನಗರಸಭೆ ಆಡಳಿತ ವಿಚಾರದ ವಾದ-ಪ್ರತಿವಾದದಿಂದಲೇ ಹೆಚ್ಚು ಸಮಯ ಕಳೆದು ಹೋಗಿದೆ.

ಅಧಿಕಾರಾವಧಿಯ ಹಿನ್ನೋಟ: 2018 ಆ.31ರಂದು ನಗರಸಭೆಗೆ ಚುನಾವಣೆ ನಡೆಯಿತು. ಅಂದಿನ ಬಿಜೆಪಿ ಸರ್ಕಾರ, ಅಧ್ಯಕ್ಷ-ಉಪಾಧ್ಯಕ್ಷರ ಮೀಸಲಾತಿ ಪ್ರಕಟಿಸಲು 2 ವರ್ಷಕ್ಕೂ ಅಧಿಕ ಸಮಯ ತೆಗೆದುಕೊಂಡಿತು. ಕಡೆಗೂ ಗಜಪ್ರಸವ ಆದಂತೆ ನಗರಸಭೆಗೆ ಅಧ್ಯಕ್ಷ ಸ್ಥಾನ

ಎಸ್‌ಟಿ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಯಿತು. ಬಿಜೆಪಿ ಹೊರತಾಗಿ ಬಹುಮತ ಪಡೆದಿದ್ದ ಜೆಡಿಎಸ್‌ನಿಂದ ಎಸ್‌ಟಿ ಸಮುದಾಯದಿಂದ ಯಾರೂ ಗೆದ್ದಿಲ್ಲದ ಕಾರಣ, ರಾಜ್ಯ ಸರ್ಕಾರ ಉದ್ದೇಶ ಪೂರ್ವಕವಾಗಿಯೇ ಎಸ್‌ಟಿಗೆ ಮೀಸಲು ನಿಗದಿ ಮಾಡಿದೆ ಎಂದು ಜೆಡಿಎಸ್‌ನವರು ಆರೋಪಿಸಿದ್ದರು.

ಸರ್ಕಾರ ನಿಯಮ ಮೀರಿ ನಗರಸಭೆ ಅಧ್ಯಕ್ಷ ಸ್ಥಾನವನ್ನ ಎಸ್.ಟಿ ವರ್ಗಕ್ಕೆ ನೀಡಿದೆ. ಇದು ಪ್ರಜಾಪ್ರಭುತ್ವ ವಿರೋಧಿ ಎಂದು ಅಂದು ಜೆಡಿಎಸ್‌ನಲ್ಲಿದ್ದ ಶಾಸಕ ಕೆ.ಎಂ. ಶಿವಲಿಂಗೇಗೌಡ ಮತ್ತು ಮಾಜಿ ಸಚಿವ ಎಚ್.ಡಿ ರೇವಣ್ಣ ಅವರ ಮಾರ್ಗದರ್ಶನದಂತೆ ಪ್ರಸ್ತುತ ನಗರಸಭೆ ಅಧ್ಯಕ್ಷರಾಗಿರುವ ಎಂ.ಸಮೀವುಲ್ಲಾ ಮತ್ತು ಇತರರು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನ ಬಾಗಿಲು ತಟ್ಟಿ ನ್ಯಾಯಪೀಠದ ಗಮನ ಸೆಳೆದಿದ್ದರು. ನ್ಯಾಯ ಹೊರ ಬರುವ ಹೊತ್ತಿಗೆ ಗಿರೀಶ್ ಅವರು ತಮ್ಮ ಅಧ್ಯಕ್ಷ ಸ್ಥಾನದ ಅವಧಿ ಪೂರ್ಣಗೊಳಿಸಿದ್ದರು. ಈ ಅವಧಿಯಲ್ಲಿ ಪರಸ್ಪರ ಗದ್ದಲ, ಗೊಂದಲದಲ್ಲೇ ಆಡಳಿತ ಮುಗಿದು ಹೋಯಿತು.

**ಹುದ್ದೆ-ಸದಸ್ಯತ್ವ ರದ್ದು:** ಈ ನಡುವೆ ನಗರದ ಬಸವರಾಜೇಂದ್ರ ಪ್ರೌಢಶಾಲೆ ಆವರಣದಲ್ಲಿದಲ್ಲಿದ್ದ ನಗರ ಸಭೆಯ ಪಂಪ್‌ಹೌಸ್ ಕಟ್ಟಡವನ್ನು ತೆರವುಗೊಳಿಸಲು ಅಂದು ಅಧ್ಯಕ್ಷರಾಗಿದ್ದ ಗಿರೀಶ್ ಸಹಕಾರ ಕೊಡುವ ಮೂಲಕ ನಗರಸಭೆ ಆಸ್ತಿ ನಷ್ಟಕ್ಕೆ ಕಾರಣರಾಗಿದ್ದಾರೆ ಎಂದು ಆರೋಪಿಸಿ ಅಂದಿನ ನಗರಸಭೆ ಆಯುಕ್ತರು, ಮೈಸೂರು ವಿಭಾಗೀಯ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ಪೀಠವು, ಗಿರೀಶ್ ಅವರನ್ನು ಅಧ್ಯಕ್ಷ ಸ್ಥಾನದಿಂದಷ್ಟೇ ಅಲ್ಲದೆ ಸದಸ್ಯತ್ವದಿಂದಲೂ ವಜಾ ಮಾಡಿತ್ತು.

ಇದನ್ನು ಗಿರೀಶ್, ಹೈಕೋರ್ಟ್‌ನಲ್ಲಿ ಪ್ರಶ್ನಿಸಿದರು ಹೈಕೋರ್ಟ್ ಕೂಡ ಗಿರೀಶ್ ಅವರ ಪ್ರಸ್ತಾವನೆ ತಿರಸ್ಕರಿಸಿ, ಮೈಸೂರು ವಿಭಾಗೀಯ ಪೀಠ ನೀಡಿದ್ದ ತೀರ್ಪನ್ನೇ ಎತ್ತಿ ಹಿಡಿದಿದ್ದರಿಂದ ಗಿರೀಶ್ ಅವರು ನಗರಸಭೆ ಸದಸ್ಯತ್ವ ಸ್ಥಾನವನ್ನೂ ಕಳೆದುಕೊಂಡಿದ್ದರು.

2024ರಲ್ಲಿ ನಗರಸಭೆಯ ಎರಡನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕಟವಾಗುವಷ್ಟರಲ್ಲಿ ಕ್ಷೇತ್ರದ ರಾಜಕಾರಣದಲ್ಲಿ ಬಹಳಷ್ಟು ಬದಲಾವಣೆಗಳಾದವು.

ಶಿವಲಿಂಗೇಗೌಡ ಅವರು ಜೆಡಿಎಸ್‌ಗೆ ಗುಡ್ ಬೈ ಹೇಳಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರೆ, ಮತ್ತೊಂದೆಡೆ ಬಿಜೆಪಿ-ಜೆಡಿಎಸ್ ಜೊತೆ ಯಾಗಿದ್ದರಿಂದ ನಗರಸಭೆ ಒಳಗೆ ಮತ್ತು ಹೊರಗೆ ಮತ್ತೊಂದು ರೀತಿಯ ನಾಟಕೀಯ ಬೆಳವಣಿಗೆಗಳಿಗೆ ವೇದಿಕೆಯಾಯಿತು.

## ಸಾಥಿ ಅಭಿಯಾನ ಯಶಸ್ವಿಗೊಳಿಸಿ: ನ್ಯಾ. ದಾಕ್ಷಾಯಿಣಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಯಾವುದೇ ಪರಿತ್ಯಕ್ತ ಮಕ್ಕಳು, ಇನ್ನಿತರೆ ಮಕ್ಕಳು ಆಧಾರ್ ನೋಂದಣಿಯಾಗದೆ ಹೊರಗುಳಿಯದಂತೆ ಗುರುತಿಸಿ ಆಧಾರ್ ನೋಂದಣಿ ಮಾಡಿಸುವ ಮೂಲಕ ಸಾಥಿ ಅಭಿಯಾನ ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ. ಜಿ.ಕೆ. ದಾಕ್ಷಾಯಿಣಿ ತಿಳಿಸಿದರು.

ಸಾಥಿ ಅಭಿಯಾನ ಸಮಿತಿ ಸದಸ್ಯರಿಗಾಗಿ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿ, ಪಾಲನೆ ಮತ್ತು ಸಂರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಆಧಾರ್ ನೋಂದಣಿ ಸರ್ಕಾರಿ ಯೋಜನೆಗಳ ಒದಗಿಸುವಿಕೆ ಮತ್ತು ಮಕ್ಕಳ ಗುರುತಿಸುವಿಕೆಗಾಗಿ ಸಾಥಿ ಅಭಿಯಾನ ಜಿಲ್ಲಾ ಮಟ್ಟದ ಸಮಿತಿ ರಚಿಸಲಾಗಿದೆ ಎಂದು ತಿಳಿಸಿದರು.




ಅಭಿಯಾನ ಸಮಿತಿ ಅಧ್ಯಕ್ಷರಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ, ಸದಸ್ಯರಾಗಿ ಜಿಲ್ಲಾ ಮಕ್ಕಳ ಸಂರಕ್ಷಣಾಧಿಕಾರಿ, ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ರು, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು, ಸ್ವಯಂ ಸೇವಾ ಸಂಸ್ಥೆಯ ಸದಸ್ಯರು, ಪ್ಯಾನಲ್ ವಕೀಲರು, ಅರೆಕಾಲಿಕ ಸ್ವಯಂ ಸೇವಕರುಗಳನ್ನು ನೇಮಿಸಲಾಗಿದೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ತಂದೆ-ತಾಯಿ ಇಲ್ಲದ ಮಕ್ಕಳು, ವಲಸೆ ಸೇರಿದಂತೆ ಇತರೆ ಕಾರಣಗಳಿಂದ ಆಧಾರ್ ಹೊಂದಿರದ ಮಕ್ಕಳನ್ನು ಗುರುತಿಸಿ ಆಧಾರ್ ಕಾರ್ಡ್ ನೋಂದಣಿ ಮಾಡಿಸಿಕೊಡಲು ಸಾಥಿ ಅಭಿಯಾನ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಜೂ. 26ರ ಒಳಗೆ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಿ ಆ. 5ರ ಒಳಗಾಗಿ ಆಧಾರ್ ಇಲ್ಲದ ಮಕ್ಕಳಿಗೆ ಆಧಾರ್ ನೋಂದಣಿ ಮಾಡುವ ಕಾರ್ಯ ಪೂರ್ಣಗೊಳ್ಳುವುದು. ಸಾರ್ವಜನಿಕರು ಅಭಿಯಾನದಲ್ಲಿ ಕೈ ಜೋಡಿಸಬಹುದು ಎಂದರು.

## ಜೋಳಕ್ಕೆ ಬಿಳಿ ಸುಳಿ ರೋಗ: ತನಿಖಾ ತಂಡ ಕಳುಹಿಸಿ

### ರಾಜ್ಯ ಸರ್ಕಾರಕ್ಕೆ ಮಾಜಿ ಸಚಿವ ರೇವಣ್ಣ ಆಗ್ರಹ | ರೈತರ ಸಮಸ್ಯೆಗೆ ಸ್ಪಂದಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಬಿಳಿಸುಳಿ ರೋಗದಿಂದ ನಾಶವಾಗುತ್ತಿರುವ ಮೆಕ್ಕೆಜೋಳ ನಷ್ಟದ ಅಧ್ಯಯನಕ್ಕೆ ರಾಜ್ಯ ಸರ್ಕಾರ ಅಧಿಕಾರಿಗಳು-ವಿಜ್ಞಾನಿಗಳನ್ನೊಳಗೊಂಡ 4 ತಂಡಗಳನ್ನು ಜಿಲ್ಲೆಗೆ ಕಳಿಸಬೇಕು ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಆಗ್ರಹಿಸಿದರು.

ಸುದ್ದಿಗೋಷ್ಟಿಯಲ್ಲಿ ಬುಧವಾರ ಮಾತನಾಡಿ, ಜಿಲ್ಲೆಯಲ್ಲಿ ಹಿಂದೆ ಲಕ್ಷಾಂತರ ಎಕರೆ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯಲಾಗುತ್ತಿತ್ತು. ಇದೇ ಪ್ರಮುಖ ವಾಣಿಜ್ಯ ಬೆಳೆಯಾಗಿತ್ತು. ಈಗ ಅದು ಕೇವಲ 4 ಸಾವಿರ ಹೆಕ್ಟೇರ್‌ಗೆ ಕುಸಿದಿದೆ. ಇದೀಗ ಮೆಕ್ಕೆಜೋಳಕ್ಕೆ ರೋಗ ಅಂಟಿದ್ದು, ಇದು ಉಲ್ಬಣಿಸಿದರೆ ಹೈನೋದ್ಯಮಕ್ಕೆ ಹೊಡೆತ ಬೀಳಲಿದೆ ಎಂದರು.

ಜಿಲ್ಲೆಯ ಅನೇಕ ಕಡೆಗಳಲ್ಲಿ ಮಣ್ಣಿನ ಆರೋಗ್ಯ ಹಾಳಾಗಿದೆ. ತೋಟಗಾರಿಕೆ ಇಲಾಖೆಯಲ್ಲಿ 263 ಮಂದಿ ಕೆಲಸ ನಿರ್ವಹಿಸಬೇಕು. ಆದರೆ ಇರುವುದು 130 ಮಂದಿ ಮಾತ್ರ. ಅರ್ಧಕ್ಕೂ ಹೆಚ್ಚು ಸಿಬ್ಬಂದಿ ಕೊರತೆ ಇದ್ದರೆ ರೈತರಿಗೆ ಯಾವ ರೀತಿಯ ಪರಿಹಾರ ನೀಡಲು ಸಾಧ್ಯ ಎಂದು ಪ್ರಶ್ನಿಸಿದ ಅವರು, ಕೂಡಲೇ ಖಾಲಿ ಹುದ್ದೆ ಭರ್ತಿ ಮಾಡಿ ಎಂದು ಒತ್ತಾಯಿಸಿದರು.



ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಜಿಲ್ಲೆಯಲ್ಲಿ 1.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗುತ್ತಿದೆ. ಈಗ ಕೇವಲ 40 ಸಾವಿರ ಹೆಕ್ಟೇರ್‌ಗೆ ಕುಸಿತ ಕಂಡಿದೆ. ಹಾಲಿ 8-10 ಸಾವಿರ ಹೆಕ್ಟೇರ್ ಪ್ರದೇಶದ ಬೆಳೆ ನಾಶವಾಗಿದೆ ಎಂದರು.

ರೋಗ ಹತೋಟಿಗೆ ಬರಲು 4-5 ಬಾರಿ ಔಷಧ ಸಿಂಪಡಿಸಬೇಕು. ಹೀಗೆ ಮಾಡಿದರೆ ಮಣ್ಣಿಗೆ ಹಾನಿಯಾಗುತ್ತದೆ. ಹಿಂದೆ ಆಲೂಗಡ್ಡೆ, ಈಗ ಮೆಕ್ಕೆಜೋಳ ರೋಗಕ್ಕೆ ತುತ್ತಾಗಿದ್ದು, ರಾಗಿಯೊಂದು ಉಳಿದಿದೆ. ಹಾಗಾಗಿ ರಾಜ್ಯ ಸರ್ಕಾರ ತಂಡಗಳನ್ನು ಕಳಿಸಿ ರೈತರಿಂದ ಮಾಹಿತಿ ಪಡೆದು ಅದಕ್ಕೆ ತಕ್ಕಂತೆ ಪರಿಹಾರ ನೀಡಬೇಕು. ಇಲ್ಲದಿದ್ದರೆ ತೋಟಗಾರಿಕೆ ಬೆಳೆಯನ್ನೂ ರೈತರು ಕಳೆದುಕೊಳ್ಳುತ್ತಿದ್ದಾರೆ ಎಂದರು.

### ಕಳ್ಳತನ ಪ್ರಶ್ನಿಸಬಾರದೆ

ನಾನು 6 ಬಾರಿ ಶಾಸಕನಾಗಿದ್ದೇನೆ, ಜಿಲ್ಲೆಯಲ್ಲಿ ಕಾನೂನು-ಸುವ್ಯವಸ್ಥೆ ಬಗ್ಗೆ ಸುಳ್ಳು ಹೇಳುವ ಅಗತ್ಯವಿಲ್ಲ ಎಂದ ರೇವಣ್ಣ ಪ್ರತಿಕ್ರಿಯಿಸಿದರು.

ಬಸವಾಘಟ್ಟ ಗ್ರಾ.ಪಂ ಸದಸ್ಯ, ಗುತ್ತಿಗೆದಾರರ ನಡುವಿನ ಜಗಳವನ್ನು ಬಗೆಹರಿಸುವ ಬದಲು 307 ಕೇಸ್ ದಾಖಲಿಸಿ ರೌಡಿಶೀಟರ್ ಹಾಕಿದ್ದಾರೆ. ಕೊಲೆ ಮಾಡಿರುವ ಎಷ್ಟು ಜನರ ಮೇಲೆ ರೌಡಿಶೀಟರ್ ಹಾಕಿದ್ದಾರೆ ಎಂದು ಮತ್ತೆ ಪ್ರಶ್ನಿಸಿದರು. ದೂರು ನೀಡಲು ಹೋದರೆ ತೆಗೆದುಕೊಳ್ಳುವುದಿಲ್ಲ ಎಂದರೆ ಯಾರ ಬಳಿ ಹೇಳಬೇಕು, ನಾನು ಪೊಲೀಸ್ ಠಾಣೆಗೆ ಕರೆ ಮಾಡಿ, ರೌಡಿಶೀಟರ್ ದಾಖಲಿಸಿ ಎಂದು ಹೇಳಿರುವುದನ್ನು ತೋರಿಸಿದರೆ ರಾಜಕೀಯ ಬಿಟ್ಟು ಹೋಗುತ್ತೇನೆ ಎಂದು ಸವಾಲು ಹಾಕಿದರು. ದಿನವೂ ಮೊಬೈಲ್ ಕಳುವಾಗುತ್ತಿದ್ದು, ನಾಲ್ಕೈದು ಮನೆ ದೋಚಲಾಗುತ್ತಿದೆ. ಇದನ್ನು ಕೇಳಬಾರದ, ಜೆಡಿಎಸ್ ಕಾರ್ಯಕರ್ತರು ತಪ್ಪು ಮಾಡಿದ್ದರೆ ಕ್ರಮ ತೆಗೆದುಕೊಳ್ಳಿ, ಅದನ್ನು ಬಿಟ್ಟು ಪಕ್ಷಪಾತ ಮಾಡಬಾರದೆಂದರು.

## ಅಭಿವೃದ್ಧಿಗೆ ಹಣ ಬಿಡುಗಡೆಗೆ ಮನವಿ: ಸಿಮೆಂಟ್ ಮಂಜು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು : ಕ್ಷೇತ್ರ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವಂತೆ ಹಲವು ಸಚಿವರಿಗೆ ಮನವಿ ಮಾಡಿದ್ದೇನೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ತಾಲ್ಲೂಕಿನ ಗಂಜಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ತಟ್ಟೆಕೆರೆ, ಚೀಕನಹಳ್ಳಿ ಮತ್ತು ಸಂಸೋಗೆ ಗ್ರಾಮಗಳ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ತಾಲ್ಲೂಕಿನ ಗಂಜಿಗೆರೆ ಗ್ರಾಮ ಪಂಚಾಯಿತಿಯ ಕೆಲವು ಗ್ರಾಮಗಳು ತಾಲ್ಲೂಕಿನ ಗಡಿಭಾಗದಲ್ಲಿದ್ದು, ಈ ಭಾಗದಲ್ಲಿ ಕಳೆದ ಬಾರಿ ಹೆಚ್ಚು ಮಳೆಯಾಗಿದ್ದು ಸಾಕಷ್ಟು ರಸ್ತೆಗಳು ಕೊಚ್ಚಿ ಹೋಗಿವೆ. ಕೆಲವು ರಸ್ತೆಗಳು ಗುಂಡಿ ಬಿದ್ದು ತಿರುಗಾಡದತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಬಿಡುಗಡೆ ಮಾಡಿರುವ ಅಲ್ಪಸ್ವಲ್ಪ ಅನುದಾನದಲ್ಲಿ ಅತ್ಯವಶ್ಯಕವಾಗಿ ಕೆಲವು ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಅವುಗಳಲ್ಲಿ ತಟ್ಟೆಕೆರೆ 80 ಲಕ್ಷ ರೂ., ಚೀಕನಹಳ್ಳಿ 20 ಲಕ್ಷ ರೂ. ಸಂಸೋಗೆ ಗ್ರಾಮದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಆಲೂರು, ಸಕಲೇಶಪುರ, ಕಟ್ಟಾಯ ಅಭಿವೃದ್ಧಿಗೆ ಸರ್ಕಾರದ ಕೆಲವು ಸಚಿವರನ್ನು ಭೇಟಿ ಮಾಡಿ ಅನುದಾನ ನೀಡುವಂತೆ ಮನವಿ ಮಾಡಿದ್ದೇನೆ. ಸಚಿವರು ಅನುದಾನ ಬಿಡುಗಡೆ ಮಾಡುವ ಭರವಸೆ ನೀಡಿದ್ದಾರೆ ಎಂದರು.

ಎತ್ತಿನಹೊಳೆ ಇಲಾಖೆ ಎಂಜಿನಿಯರ್ ಉಮರ್ ಪಾರುಖ್, ನಶಾತ್, ಗುತ್ತಿಗೆದಾರ ನಿಖಿತ್, ಲಿಖಿತ್, ಪ್ರದೀಪ್, ಉಮೇಶ್, ಪ್ರಮೋದ್ ಇತರರಿದ್ದರು.

## ಹೃದಯಾಘಾತ: ಯುವಕ ಸಾವು

ಹೊಳೆನರಸೀಪುರ: ದಿಢೀರ್ ಹೃದಯಾಘಾತದಿಂದ ಡಿಪ್ಲೊಮಾ ವಿದ್ಯಾರ್ಥಿ ಬುಧವಾರ ಬೆಂಗಳೂರಿನಲ್ಲಿ ಮೃತಪಟ್ಟಿದ್ದಾನೆ.



ಪಟ್ಟಣದ ಅಂಬೇಡ್ಕರ್ ನಗರ ನಿವಾಸಿ ಕೇಶವ್ ಅವರ ಪುತ್ರ ನಿತಿನ್ (20) ಮೃತರು. ತಾಲ್ಲೂಕಿನ ಹೊನ್ನಿಕೊಪ್ಪಲು ಸಮೀಪದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮಾ ಪದವಿ ಮುಗಿಸಿದ್ದು, ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಅಪ್ರೆಂಟಿಸ್ ತರಬೇತಿ ನಡೆಸಿದ್ದರು. ಸ್ನೇಹಿತರೊಂದಿಗೆ ಪಿಜಿಯಲ್ಲಿ ಉಳಿದಿದ್ದ ಈತ ಬೆಳಗ್ಗೆ ಎಚ್ಚರಗೊಳ್ಳದಿದ್ದಾಗ ಸ್ನೇಹಿತರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ವೈದ್ಯರು ಮೃತಪಟ್ಟಿರುವ ಬಗ್ಗೆ ಖಾತ್ರಿ ಪಡಿಸಿ ಮರಣೋತ್ತರ ಪರೀಕ್ಷೆ ನಡೆಸಿರುವುದಾಗಿ ಸಂಬಂಧಿಕ ಉಮೇಶ್ ತಿಳಿಸಿದ್ದಾರೆ.

## ಕುರಿ ಬಲಿ ಪಡೆದ ಬೀದಿ ನಾಯಿಗಳು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಬಿಳಿಕೆರೆ ಕಾಲನಿ ಗ್ರಾಮದಲ್ಲಿ ಬುಧವಾರ ಬೀದಿ ನಾಯಿಗಳ ದಾಳಿಗೆ ಕುರಿ ಬಲಿಯಾಗಿದೆ.

ಗ್ರಾಮದ ಶ್ರೀನಿವಾಸ್ ತಮ್ಮ ಮನೆ ಮುಂಭಾಗದ ತೋಟದಲ್ಲಿ ಮೇವಿಗೆಂದು 4 ಕುರಿಗಳನ್ನು ಬಿಟ್ಟಿದ್ದರು. ಈ ವೇಳೆ ಏಳೆಂಟು ನಾಯಿಗಳ ಹಿಂಡು ದಾಳಿ ಮಾಡಿದ್ದು ಒಂದು ಕುರಿಯ ಕುತ್ತಿಗೆ, ಹೊಟ್ಟೆ ಹಾಗು ತೊಡೆ ಭಾಗವನ್ನು ಕಚ್ಚಿ ಬಲಿ ಪಡೆದಿವೆ.

ಮನೆಯವರು ಹಾಗು ಅಕ್ಕಪಕ್ಕದವರು ಕೂಗಾಡುತ್ತ ಸ್ಥಳಕ್ಕೆ ಧಾವಿಸಿದ್ದರಿಂದ ನಾಯಿಯ ಹಿಂಡು ಅಲ್ಲಿಂದ ಕಾಲ್ಕಿತ್ತಿದೆ. ಉಳಿದ ಕುರಿಗಳು ಬದುಕುಳಿದಿವೆ ಎಂದು ರೈತರು ತಿಳಿಸಿದರು.

ಊರಿನಲ್ಲಿ ನಾಯಿಗಳು ಹೆಚ್ಚಾಗಿದ್ದು ಹಿಂಡು ಹಿಂಡಾಗಿ ಜಮೀನು ಹಾಗೂ ತೋಟದ ಸಾಲಿನಲ್ಲಿ ಸುತ್ತುವುದರ ಜೊತೆಗೆ ಜನ ಜಾನುವಾರುಗಳ ಮೇಲೆ ಹಾವಳಿ ಮಾಡುತ್ತಿವೆ. ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ ಎಂದು ಶ್ರೀನಿವಾಸ್ ಆರೋಪಿಸಿದರು.


ಇತ್ತೀಚಿನ ದಿನಗಳಲ್ಲಿ ಬೀದಿ ನಾಯಿಗಳ ಸಂತತಿ ಹೆಚ್ಚಾಗಿದ್ದು, ಗುಂಪು ಗುಂಪಾಗಿ ಕಾಣಿಸಿಕೊಳ್ಳುತ್ತಿವೆ. ರಸ್ತೆಗಳಲ್ಲಿ ಸಂಚರಿಸುವ ಬೈಕ್ ಸವಾರರು ಮತ್ತು ಪಾದಚಾರಿಗಳ ಮೇಲೆ ದಿಢೀರನೆ ದಾಳಿ ಮಾಡುತ್ತವೆ. ಕಾರುಗಳ ಹಿಂದೆ ಓಡುತ್ತವೆ. ಇದರಿಂದ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿವೆ ಎಂದು ಸ್ಥಳೀಯರು ಹೇಳಿದರು.

## ಸಾಹಿತಿ ಬಾನು ಮುಷ್ತಾಕ್‌ಗೆ ಬಿಎಸ್‌ಪಿ ಸನ್ಮಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾದ ಬಾನು ಮುಷ್ತಾಕ್ ಅವರು ಕನ್ನಡದ ಕೀರ್ತಿ ಕಳಸ ಎಂದು ಬಹುಜನ ಸಮಾಜ ಪಕ್ಷದ ರಾಜ್ಯಾಧ್ಯಕ್ಷ ಎಂ. ಕೃಷ್ಣಮೂರ್ತಿ ತಿಳಿಸಿದರು.

ನಗರದ ಸಾಹಿತಿ ಬಾನು ಮುಷ್ತಾಕ್ ಅವರ ಮನೆಗೆ ಭೇಟಿ ನೀಡಿ ಸನ್ಮಾನಿಸಿದ ಅವರು ಮಾತನಾಡಿ, ಕನ್ನಡದ ಕಂಪನ್ನು ಜಾಗತಿಕ ಮಟ್ಟದಲ್ಲಿ ಪಸರಿಸಿದ ಕೀರ್ತಿ ಬಾನು ಮುಷ್ತಾಕ್ ಅವರಿಗೆ ಸಲ್ಲುತ್ತದೆ. ಜ್ಞಾನಕ್ಕೆ ಯಾವುದೇ ಎಲ್ಲೆ ಇಲ್ಲ. ಜಾತಿ, ಮತ, ಪಂಥ, ಗಡಿ, ಭಾಷೆ ಎಲ್ಲವನ್ನೂ ಮೀರಿ ನಿಲ್ಲುತ್ತದೆ ಎಂಬುದಕ್ಕೆ ಬಾನು




ಮುಸ್ತಾಕ್ ಅವರ ಕೃತಿಗೆ ಪ್ರತಿಷ್ಠಿತ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ದೊರಕಿರುವುದೇ ಸಾಕ್ಷಿ ಎಂದರು.

ಕನ್ನಡ ಸಾಹಿತ್ಯದ ಮೂಲಕ ನೊಂದ ಎದೆಯಲ್ಲಿ ಬೆಳಕೆಂಬ ಹಣತೆ ಹಚ್ಚಿ ಸಾಹಿತ್ಯ ಲೋಕವನ್ನೇ ಬೆಳಗಿಸಿ ಜಗತ್ತನ್ನು ನಿಬ್ಬೆರಗಾಗುವಂತೆ ಪ್ರಶಸ್ತಿಯನ್ನು ತಾಯ್ನೆಲದ ಮುಡಿಗೇರಿಸಿದ ಬಾನು ಮುಷ್ತಾಕ್ ಅವರ ಸಾಧನೆ ಅವಿಸ್ಮರಣೀಯವಾದುದು. ಇವರಿಂದ ಇನ್ನು ಹೆಚ್ಚಿನ ಸಾಹಿತ್ಯ ಕೃಷಿ ನಡೆಯಲಿ ಎಂದು ಆಶಿಸಿದರು.

ಬಿಎಸ್ಪಿ ರಾಜ್ಯ ಉಸ್ತುವಾರಿ ಗಂಗಾಧರ್ ಬಹುಜನ್, ಜಿಲ್ಲಾಧ್ಯಕ್ಷ ಲಕ್ಷ್ಮಣ್ ಕೀರ್ತಿ, ಜಿಲ್ಲಾ ಉಸ್ತುವಾರಿ ಹೆಚ್.ಬಿ. ಮಲ್ಲಯ್ಯ, ಜಿಲ್ಲಾ ಉಪಾಧ್ಯಕ್ಷ ಶಾಕೀರ್ ಅಹಮ್ಮದ್, ಸಂಯೋಜಕ ಕಿರಣ್ ಕುಮಾರ್, ಆಲೂರು ಉಸ್ತುವಾರಿ ರಾಜಣ್ಣ, ಸಂಯೋಜಕ ಮಂಜುನಾಥ್ ಎಂ. ಹೊಸಳ್ಳಿ, ಆಲೂರು ತಾಲ್ಲೂಕು ಅಧ್ಯಕ್ಷ ರಘು ಅಬ್ಬನ, ಶಿವಮ್ಮ, ನೀಲಾವತಿ ಬಹುಜನ್, ದಿಶಾ ಜಿ. ಬಹುಜನ್, ಕೀರ್ತಿ ಹಾಗೂ ಇತರರಿದ್ದರು.

## ಸರ ಕದಿಯಲೆತ್ನಿಸಿದವನಿಗೆ ಗೂಸಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ನಗರದ ಹೊಸ ಬಸ್ ನಿಲ್ದಾಣದಲ್ಲಿ ಮಹಿಳೆ ಕೊರಳಿಂದ ಚಿನ್ನದ ಸರ ದೋಚಲು ಯತ್ನಿಸಿದ ಕಳ್ಳನನ್ನು ಸಾರ್ವಜನಿಕರು ಹಿಡಿದು ಗೂಸಾ ನೀಡಿದ್ದಾರೆ. ಕೈಗಾರಿಕಾ ಪ್ರದೇಶದ ಸಾದರಹಳ್ಳಿಯ ಮಹಿಳೆಯೊಬ್ಬರು ತಮ್ಮ ಕುಟುಂಬಸ್ಥರೊಂದಿಗೆ ಬಸ್ ನಿಲ್ದಾಣಕ್ಕೆ ಬಂದಿದ್ದರು. ಊಟ ಮಾಡಲೆಂದು ಹೋಟೆಲ್‌ಗೆ ತೆರಳುತ್ತಿದ್ದಾಗ ಹಿಂದಿನಿಂದ ಬಂದ ಕಳ್ಳ ಕೊರಳಿಗೆ ಕೈ ಹಾಕಿ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾನೆ. ಆತನ ಹಿಂದೆ ಬರುತ್ತಿದ್ದ ಮತ್ತೊಬ್ಬ ಮಹಿಳೆ ಗಮನಿಸಿ ತಕ್ಷಣವೇ ಕಳ್ಳನನ್ನು ಹಿಡಿದು ಸಾರ್ವಜನಿಕರಿಗೆ ಒಪ್ಪಿಸಿದ್ದಾರೆ. ಮಹಿಳೆಯ ಕೊರಳಿಗೆ ಕೈ ಹಾಕಿ ಕಳ್ಳ ಜೋರಾಗಿ ಎಳೆದಿದ್ದರಿಂದ ಗಾಯವಾಗಿದೆ. ಕಳ್ಳನನ್ನು ಸಾರ್ವಜನಿಕರು ಮನಬಂದಂತೆ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

## ಕಾಣೆಯಾಗಿದ್ದ ವ್ಯಕ್ತಿ ಶವ ಕೆರೆಯಲ್ಲಿ ಪತ್ತೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಆಲೂರು: ಕಾಣೆಯಾಗಿದ್ದ ವ್ಯಕ್ತಿಯ ಶವ ತಾಲ್ಲೂಕಿನ ಭರತವಳ್ಳಿ ಗ್ರಾಮದ ಈಚಲಕಟ್ಟೆ ಕೆರೆಯಲ್ಲಿ ಬುಧವಾರ ಪತ್ತೆಯಾಗಿದ್ದು, ಬಹಿರ್ದೆಸೆಗೆಂದು ತೆರಳಿದ್ದಾಗ ಆಕಸ್ಮಿಕವಾಗಿ ಕೆರೆಗೆ ಬಿದ್ದಿದ್ದ ಎನ್ನಲಾಗಿದೆ. ಹೊಳೆನರಸೀಪುರ ಪಟ್ಟಣದ ಕೋಟೆ ನಿವಾಸಿ ಪ್ರವೀಣ್ (37) ಮೃತ ದುರ್ದೈವಿ. ಆಲೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಪ್ರವೀಣ್ ಹಾಸನದ ಡೈರಿಯಲ್ಲಿ ಕಿರಿಯ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದ. ಮದ್ಯವ್ಯಸನಿಯಾಗಿದ್ದ ಪ್ರವೀಣ್ ಇತ್ತೀಚೆಗೆ ಕುಟುಂಬದಿಂದ ದೂರ ಉಳಿದಿದ್ದ. ಆಲೂರಿನಲ್ಲಿ ಸ್ನೇಹಿತನನ್ನು ನೋಡಲು ಆಗಾಗ ಬರುತ್ತಿದ್ದ. ಎರಡು ದಿನಗಳ ಹಿಂದೆ ಬಹಿರ್ದೆಸೆಗೆಂದು ತೆರಳಿದ್ದಾಗ ಕೆರೆಯಲ್ಲಿ ಮುಳುಗಿ ಮೃತಪಟ್ಟಿರಬಹುದು ಎನ್ನಲಾಗಿದೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಾಡಿಕೆಗಿಂತ ಅಧಿಕ ಮಳೆ: ಕೃಷಿ ಚಟುವಟಿಕೆ ಚುರುಕು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಾಲ್ಲೂಕಿನಲ್ಲಿ ಈ ಸಲ ವಾಡಿಕೆಗಿಂತ ಅಧಿಕ ಮುಂಗಾರು ಪೂರ್ವ ಮಳೆ ಬಿದ್ದಿದೆ. ಪರಿಣಾಮವಾಗಿ ಅತಿಯಾದ ತೇವಾಂಶದಿಂದ ಬಿತ್ತಿದ ಬೆಳೆಗಳನ್ನು ಕಳೆದುಕೊಳ್ಳುವ ಆತಂಕ ರೈತರಲ್ಲಿ ಮನೆ ಮಾಡಿತ್ತು. ಈಗ ಮಳೆ ಬಿಡುವು ನೀಡಿದ್ದು ಬೆಳೆಗಳ ಆರೈಕೆಯಲ್ಲಿ ತೊಡಗಿದ್ದಾರೆ.

ತಾಲೂಕಿನ ಪ್ರಮುಖ ವಾಣಿಜ್ಯ ಬೆಳೆ ತಂಬಾಕು ಹಾಗೂ ಆಲೂಗಡ್ಡೆ ಬಿತ್ತನೆಗೆ ಮುಂಗಾರು ಪೂರ್ವ ಮಳೆ ಕಂಟಕವಾಗಿ ಪರಿಣಮಿಸಿತು. ಸಸಿಮಡಿ ಬೆಳೆಸಿದ್ದ ರೈತರು ಕಳೆದ ತಿಂಗಳು ಉತ್ತಮವಾಗಿ ಮಳೆ ಬಿದ್ದ ಖುಷಿಯಲ್ಲಿ ಸಾವಿರಾರು ಎಕರೆ ಪ್ರದೇಶದಲ್ಲಿ ತಂಬಾಕು ನಾಟಿ ಮಾಡಿದ್ದರು. ಇನ್ನೇನು ರಸಗೊಬ್ಬರ ನೀಡಿ ಗಿಡಗಳನ್ನು ಆರೈಕೆ ಮಾಡಬೇಕು ಎನ್ನುವಷ್ಟರಲ್ಲಿ ನಾಟಿ ಮಾಡಿದ ಒಂದು ವಾರದ ಅಂತರದಲ್ಲಿ ಮುಂಗಾರು ಪೂರ್ವ ಮಳೆ ಎಡಬಿಡದೆ ಸುರಿಯಲಾರಂಭಿಸಿತು. ಅತಿಯಾದ ಮಳೆಗೆ ತಂಬಾಕು ನಾಟಿ ಮಾಡಿದ ಗಿಡಗಳು ಬೇರು ಬಿಡದೆ ಕೊಳೆಯಲಾರಂಭಿಸಿದವು. ಹೀಗಾಗಿ ತಗ್ಗು ಪ್ರದೇಶದ ಜಮೀನುಗಳಲ್ಲಿ ತಂಬಾಕು ಸಸಿಗಳು ಜಲಾವೃತಗೊಂಡು



ಸಾಕಷ್ಟು ಕಡೆ ನಾಟಿ ಮಾಡಿದ ಗಿಡಗಳ ಬೆಳವಣಿಗೆಗೆ ಹೊಡೆತ ಬಿದ್ದಿದೆ.

**ಬೆಳೆಗಳ ಪೋಷಣೆಯಲ್ಲಿ ರೈತರು**

ಇದೀಗ ಕೆಲ ದಿನಗಳಿಂದ ಮಳೆ ಇಲ್ಲದ ಕಾರಣ ರೈತರು ಜಮೀನುಗಳತ್ತ ಮುಖ ಮಾಡಿದ್ದು ಹೊಗೆಸೊಪ್ಪು ಗಿಡಗಳಿಗೆ ರಸಗೊಬ್ಬರ ನೀಡಿ ಕಳೆ ತೆಗೆಯುತ್ತಿದ್ದಾರೆ. ಕೆಲವು ಕಡೆ ಮಳೆಯಿಂದಾಗಿ ಗಿಡಗಳಿಗೆ ಸೊರಗು ರೋಗ ಕಾಣಿಸಿಕೊಂಡಿದೆ. ಔಷಧಿ ಸಿಂಪಡಣೆ ಮಾಡಿ ರೈತರು ಬೆಳೆ ರಕ್ಷಣೆ ಮಾಡಿಕೊಳ್ಳಲು ನಿರತರಾಗಿದ್ದಾರೆ.

**ಆಲೂ ಬಿತ್ತನೆ ಕುಸಿತ :** ಈ ಬಾರಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಅಧಿಕವಾಗಿ ಸುರಿದ ಪರಿಣಾಮ ಆಲೂಗಡ್ಡೆ ಬಿತ್ತನೆ ಪ್ರಮಾಣ ಕುಸಿದಿದೆ. ತೋಟಗಾರಿಕೆ ಇಲಾಖೆ ಮಾಹಿತಿ ಪ್ರಕಾರ ತಾಲೂಕಿನಲ್ಲಿ 800 ಎಕರೆ ಪ್ರದೇಶದಲ್ಲಿ ಆಲೂಗಡ್ಡೆ ಬಿತ್ತನೆ ಗುರಿ ಹೊಂದಲಾಗಿತ್ತು.

ಮಳೆ ಕಾರಣ ಸದ್ಯಕ್ಕೆ 350 ಎಕರೆ ಜಮೀನಿನಲ್ಲಿ ಬಿತ್ತನೆ ಮಾಡಲಾಗಿದೆ. ಭಾರಿ ಮಳೆ ಪರಿಣಾಮ ಆಲೂಗಡ್ಡೆ ಬಿತ್ತನೆಗೆ ಹಿನ್ನಡೆಯಾಗಿದೆ.

> ಮುಂಗಾರು ಪೂರ್ವ ಮಳೆ ಈ ಬಾರಿ ವಾಡಿಕೆಗಿಂತ ಅಧಿಕವಾಗಿ ಸುರಿದಿದೆ. 4800 ಹೆಕ್ಟೇರ್ ಗುರಿ ಬದಲಿಗೆ 6200 ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ನಾಟಿ ಮಾಡಿಲಾಗಿದೆ. ಮಳೆಯಿಂದ ಶೀತಾಂಶ ಹೆಚ್ಚಿ ಶೇ. 10ರಷ್ಟು ಹೊಗಸೊಪ್ಪು ಗಿಡಗಳಿಗೆ ಹಾನಿಯಾಗಿದೆ.
>
> **– ಕವಿತಾ, ತಾಲೂಕು ಸಹಾಯಕ ಕೃಷಿ ನಿರ್ದೇಶಕಿ, ಅರಕಲಗೂಡು.**

**33ಸಾವಿರ ಹೆಕ್ಟೇರ್‌ನಲ್ಲಿ ಕೃಷಿ:** ಕೃಷಿ ಇಲಾಖೆ ಮಾಹಿತಿ ಪ್ರಕಾರ 19700 ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಗುರಿ ಹೊಂದಲಾಗಿದ್ದು ಸದ್ಯಕ್ಕೆ 12150 ಹೆಕ್ಟೇರ್ ಬಿತ್ತನೆಯಾಗಿದೆ. 6200 ಹೆಕ್ಟೇರ್ ನಲ್ಲಿ ತಂಬಾಕು ಬಿತ್ತನೆಯಾಗಿದೆ.35700 ಹೆಕ್ಟೇರ್ ಗುರಿ ಹೊಂದಲಾಗಿದ್ದ ಏಕದಳ ಧಾನ್ಯ ಬೆಳೆಗಳನ್ನೂ ಸಹ 13150 ಹೆಕ್ಟೇರ್ ಬಿತ್ತನೆ ಮಾಡಲಾಗಿದೆ. 1575 ಹೆಕ್ಟೇರ್ ನಲ್ಲಿ ಬಿತ್ತನೆಯಾಗಬೇಕಿದ್ದ ದ್ವಿದಳ ಧಾನ್ಯ ಬೆಳೆಗಳನ್ನು 655 ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಇನ್ನುಳಿದಂತೆ ಉದ್ದು ಆಲಸಂದೆ, ಹೆಸರು 700 ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಮುಂಗಾರು ಪೂರ್ವ ಮಳೆ ಅಬ್ಬರದಿಂದಾಗಿ ಬಹುತೇಕ ಬಿತ್ತನೆಯಾದ ಉದ್ದು ಹೆಸರು ಆಲಂಸದೆ ನೆಲ ಬಿಟ್ಟು ಮೇಲೆಳದೆ ಕೊಳೆತು ನಾಶವಾಗಿದೆ. ಸಾಕಷ್ಟು ಭಾಗದಲ್ಲಿ ಬಿತ್ತನೆ ಬೀಜ ಮೊಳಕೆಯೊಡೆಯದೆ ಮಣ್ಣುಪಾಲಾಗಿದೆ.

> ಆಲೂಗಡ್ಡೆ ಬಿತ್ತನೆ ಹಂಗಾಮಿನಲ್ಲಿ ಕಳೆದ ಎರಡು ವಾರಗಳಿಂದ ಸತತವಾಗಿ ಮಳೆಯಾದ ಕಾರಣ ಬಿತ್ತನೆಗೆ ತೊಡಕಾಗಿದೆ. ಹೀಗಾಗಿ ನಿಗದಿತ ಗುರಿ ತಲುಪಲು ಸಾಧ್ಯವಾಗಿಲ್ಲ. ಮಳೆಯಿಂದಾಗಿ ಆಲೂಗಡ್ಡೆ ಬಿತ್ತನೆ ಬದಲಿಗೆ ರೈತರು ಮುಸುಕಿನ ಜೋಳ ಮತ್ತಿತರ ಬೆಳೆಗಳ ಬಿತ್ತನೆಯಲ್ಲಿ ತೊಡಗಿರುವುದು ಕಂಡುಬಂದಿದೆ.
>
> **– ರಾಜೇಶ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ, ಅರಕಲಗೂಡು.**

# ಮನುಷ್ಯನ ದುರಾಸೆಯಿಂದ ಪ್ರಕೃತಿ ನಾಶ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು : ಮನುಷ್ಯನ ದುರಾಸೆಯಿಂದ ಪ್ರಕೃತಿ ನಾಶವಾಗಿ ಎಷ್ಟೋ ಜೀವಸಂಕುಲ ಅಳಿವಿನಂಚಿಗೆ ಬಂದು ನಿಂತಿವೆ ಎಂದು ಸಾಲು ಮರದ ಪೊಲೀಸ್ ವೈ.ಬಿ. ಕಾಂತರಾಜ್ ಹೇಳಿದರು.

ತಾಲ್ಲೂಕಿನ ತಾಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಿರಿ ಸಮೃದ್ಧಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಮಕ್ಕಳಿಗೆ ಉಚಿತ ಕಲಿಕಾ ಸಲಕರಣೆಗಳ ವಿತರಣಾ ಕಾರ್ಯಕ್ರಮದಲ್ಲಿ ನೋಟ್ ಬುಕ್ಸ್, ಪೆನ್, ಸ್ಕೇಲ್ ಹಾಗೂ ಮಾಸ್ಕ್ ವಿತರಿಸಿ ಮಾತನಾಡಿ, ಪ್ರಕೃತಿ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ನಾನು ಪ್ರಕೃತಿಗಾಗಿ ಏನು ಕೊಡುಗೆ ಕೊಟ್ಟಿದ್ದೇನೆ ಎಂದು ಪ್ರಶ್ನಿಸಿಕೊಳ್ಳಬೇಕು. ಕೇವಲ ಬೂಟಾಟಿಕೆಯ ಪರಿಸರ ದಿನಾಚರಣೆಗಿಂತ ಪ್ರತಿಯೊಬ್ಬರೂ ಸಸಿಗಳನ್ನು ನೆಟ್ಟು ಅದನ್ನು ಪೋಷಿಸಿದಾಗ ಮಾತ್ರ ಪ್ರಕೃತಿಯ ಸೊಬಗು ಪ್ರಗತಿಕಾಣಲು ಸಾಧ್ಯ. ಬಸವಣ್ಣನವರ ತತ್ತ್ವ ಸಿದ್ಧಾಂತಗಳು, ಸಿದ್ಧರಾಮೇಶ್ವರರ ಕಾಯಕನಿಯಮಗಳು, ಅಂಬೇಡ್ಕರ್ ವಿಚಾರಧಾರೆಗಳು ಸಮಸಮಾಜವನ್ನು ನಿರ್ಮಾಣ ಮಾಡುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳ ಬದುಕು ಹಸನಾಗಬೇಕಾದರೆ ಗುಣಾತ್ಮಕ ಶಿಕ್ಷಣದ ಅಗತ್ಯವಿದೆ. ಇಂತಹ ಗುಣಾತ್ಮಕ ಶಿಕ್ಷಣ ದೊರೆಯುವುದೇ ಸರ್ಕಾರಿ ಶಾಲೆಗಳಲ್ಲಿ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಟಿ.ಕೆ. ದಿನೇಶ್ ಮಾತನಾಡಿ, ನಾವು ಓದುವಾಗ ನಮಗೆ ಯಾರೂ ಈ ರೀತಿ ಉಚಿತ ಕಲಿಕಾ ಸಾಮಾಗ್ರಿಗಳನ್ನು ಒದಗಿಸುತ್ತಿರಲಿಲ್ಲ. ಒಂದು ಪೆನ್ಸಿಲ್ ಖಾಲಿಯಾದಾಗಲೂ ಹೊಸದೊಂದು ಕೊಡಿಸಿಕೊಳ್ಳಲು ಹರಸಾಹಸಪಡುತ್ತಿದ್ದೆವು. ಇಷ್ಟೊಂದು ಉಚಿತ ಸೌಕರ್ಯಗಳು ನಮಗೆ ದೊರೆತತ್ತಿದ್ದರೆ ನಾವೂ ಇನ್ನೂ ಉತ್ತಮ ಜೀವನ ನಡೆಸಬಹುದಿತ್ತು. ಆದ್ದರಿಂದ ಇವತ್ತು ದಾನಿಗಳು ಕೊಟ್ಟ ಕೊಡುಗೆ ಸಾರ್ಥಕತೆ ಕಾಣಬೇಕಾದರೆ ನೀವೆಲ್ಲಾ ಚೆನ್ನಾಗಿ ಓದಿ ಉತ್ತಮ ವಿದ್ಯಾರ್ಥಿಗಳಾದಾಗ ಮಾತ್ರ ಎಂದರು.

ಮುಖ್ಯಶಿಕ್ಷಕ ಕೊಟ್ರೇಶ್ ಎಸ್. ಉಪ್ಪಾರ್, ಸಹ ಶಿಕ್ಷಕಿ ವಿ. ರವಿತ, ಅತಿಥಿ ಶಿಕ್ಷಕಿ ಆರ್.ಎಸ್. ರೇಖಾ, ಸಿರಿಸಮೃದ್ಧಿ ಚಾರಿಟಬಲ್ ಟ್ರಸ್ಟಿ ಮಿಥುನ್, ಅರುಣ್ ಕುಮಾರ್ ಹಾಗೂ ಇತರರಿದ್ದರು.

# ಜೂನ್ 15 ರಿಂದ 25ರ ವರೆಗೆ ಸಂಚಾರ ನಿಷೇಧ

ಹಾಸನ: ರಾಷ್ಟ್ರೀಯ ಹೆದ್ದಾರಿ 75ರ ನಗರದ ರಾಜೀವ್ ಎಂಜಿನೀಯರಿಂಗ್ ಕಾಲೇಜು ಸಮೀಪ ಬೈಪಾಸ್ ರಸ್ತೆಯ ರೈಲ್ವೆ ಮೇಲ್ಸೇತುವೆ ದುರಸ್ತಿ ಕಾಮಗಾರಿ ಹಿನ್ನಲೆಯಲ್ಲಿ ಜೂ. 15 ರಿಂದ 25ರ ವರೆಗೆ ವಾಹನ ಸಂಚಾರ ನಿಷೇಧಿಸಲಾಗಿದೆ.

ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ರೀತಿಯ ವಾಹನ ಸಂಚಾರ ನಿಷೇಧಿಸಿ ಸದರಿ ದಿನಾಂಕದಂದು ಎಲ್ಲಾ ರೀತಿಯ ವಾಹನಗಳು ಬುಸ್ತೇನಹಳ್ಳಿ ಸರ್ಕಲ್-ಡೈರಿವೃತ್ತ ಮಾರ್ಗವಾಗಿ-ಸಾಲಗಾಮೆ ರಸ್ತೆಯ ಸುಬೇದಾರ್ ಸರ್ಕಲ್-ಬೇಲೂರು ರಸ್ತೆ- ವಿಜಯ ನಗರ ಬಡಾವಣೆಯ 80 ಅಡಿ ಮುಖ್ಯ ರಸ್ತೆ-ದೇವರಾಯಪಟ್ಟಣ ಸರ್ಕಲ್ ಮಾರ್ಗದ ಮೂಲಕ ಎಲ್ಲಾ ರೀತಿಯ ವಾಹನಗಳು ಸಂಚರಿಸಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ತಿಳಿಸಿದ್ದಾರೆ.

# ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಗೆ ಆಹ್ವಾನ

ಹಾಸನ: ಜಿಲ್ಲೆಯಲ್ಲಿ ಓರಿಯಂಟಲ್ ಜನರಲ್ ಇನ್‌ಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಬೆಂಗಳೂರು ಇವರ ಸಹಯೋಗದೊಂದಿಗೆ 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ರೈತರು ಅರ್ಜಿಯೊಂದಿಗೆ ಭೂಮಿ ದಾಖಲೆಗಳಾದ ಪಹಣಿ/ಕಂದಾಯ ರಶೀತಿ/ಖಾತೆ ಪುಸ್ತಕ/ಬ್ಯಾಂಕ್ ಪಾಸ್ ಪುಸ್ತಕ ಮತ್ತು ಆಧಾರ್‌ಕಾರ್ಡ್ ದಾಖಲೆಗಳೊಂದಿಗೆ ಹತ್ತಿರದ ಬ್ಯಾಂಕ್, ಕರ್ನಾಟಕ ಒನ್, ಗ್ರಾಮಒನ್ ಹಾಗೂ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಬಹುದಾಗಿದೆ.

2024-25ನೇ ಸಾಲಿನಲ್ಲಿ ನೋಂದಾಯಿಸಿದ 43307 ರೈತರಿಗೆ 26.89 ಕೋಟಿ ರೂ. ಬೆಳೆ ವಿಮಾ ಪರಿಹಾರ ಪಾವತಿಯಾಗಿದೆ.

2025-26ನೇ ಸಾಲಿನಲ್ಲಿ ರೈತರು ನೋಂದಾಯಿಸಿಕೊಳ್ಳಲು ಪ್ರತಿ ಎಕರೆಗೆ ಹೆಸರು ಬೆಳೆ (ಮಳೆ ಆಶ್ರಿತ) 269 ರೂ., ಉದ್ದು 265 ರೂ., ಎಳ್ಳು 233 ರೂ., ವಿಮಾ ಕಂತನ್ನು ಪಾವತಿಸಿ ನೋಂದಾಯಿಸಲು ಜೂ. 30 ಕಡೆಯ ದಿನವಾಗಿದೆ.

ಅದೇ ರೀತಿ ಅಲಸಂದೆ 243 ರೂ., ಆಲೂಗೆಡ್ಡೆ 1463 ರೂ., ಆಲೂಗಡ್ಡೆ (ನೀರಾವರಿ) 3006 ರೂ., ಟೊಮ್ಯಾಟೋ- 2864 ರೂ., ಹತ್ತಿ 1007 ರೂ. ವಿಮಾ ಕಂತನ್ನು ಪಾವತಿಸಿ ನೋಂದಾಯಿಸಲು ಜುಲೈ 15 ಅಂತಿಮ ದಿನ.

ಭತ್ತ (ಮಳೆ ಆಶ್ರಿತ) 516 ರೂ., ಮುಸುಕಿನಜೋಳ 522 ರೂ., ಮುಸುಕಿನಜೋಳ

457 ರೂ., ಜೋಳ 310 ರೂ., ಸಾವೆ 229 ರೂ., ತೊಗರಿ 389 ರೂ., ಸೂರ್ಯಕಾಂತಿ 330 ರೂ., ವಿಮಾ ಕಂತನ್ನು ಪಾವತಿಸಿ ನೋಂದಾಯಿಸಲು ಜುಲೈ 31 ಕಡೆಯ ದಿನವಾಗಿದೆ.

ಭತ್ತ 755 ರೂ., ರಾಗಿ 344 ರೂ., ರಾಗಿ 411 ರೂ., ಹುರುಳಿ 166 ರೂ. ವಿಮಾ ಕಂತನ್ನು ಪಾವತಿಸಿ ನೊಂದಾಯಿಸಲು ಆ. 16 ಅಂತಿಮ ದಿನವಾಗಿದೆ. ಮಾಹಿತಿಗೆ ರೈತರು ಬೆಳೆ ವಿಮಾ ಸಂಸ್ಥೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಸಹಕಾರ ಇಲಾಖೆ ಹಾಗೂ ಬೆಳೆ ಸಾಲ ನೀಡುವ ಬ್ಯಾಂಕ್‌ಅಥವಾ ಸಹಕಾರಿ ಬ್ಯಾಂಕ್‌ಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ವೇಲಾಪುರಿಯಲ್ಲಿ ಅವಧೂತರ ಜನ್ಮ ವರ್ಧಂತ್ಯುತ್ಸವ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಪೋನಿಷ್ಟರು, ಕಾಲಜ್ಞಾನಿಗಳು, ಸಕಲಶಾಸ್ತ್ರಪರಿಣಿತರು, ಸರ್ವ ಭಕ್ತರನ್ನು ಅಭಿಮಾನದಿಂದ ಆರ್ಶಿವಾದಿಸುವ ಪರಮಪೂಜ್ಯ ಶ್ರೀ ಅರ್ಜುನ ಅವಧೂತರ ಜನ್ಮ ವರ್ಧಂತ್ಯುತ್ಸವ ಪಟ್ಟಣದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಕಲ್ಯಾಣ ಮಂಟಪದಲ್ಲಿ ಅರ್ಥಪೂರ್ಣವಾಗಿ ನೆರವೇರಿತು.

ಪೇಟೆ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಚಂಡಿಕಾ ಹೋಮದ ಪೂರ್ಣಾಹುತಿ ಮತ್ತು ಶ್ರೀ ಸತ್ಯನಾರಾಯಣ ಪೂಜಾ ಮಹಾಮಂಗಳಾರತಿ ನಡೆಸಲಾಯಿತು. ಬಳಿಕ 108 ಮಹಿಳೆಯರ ಮೂಲಕ ಪೂರ್ಣಕುಂಭಗಳೊಂದಿಗೆ ಸ್ವಾಗತಿಸಿ ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಚೆನ್ನಕೇಶವ ದೇಗುಲದಿಂದ ಶೋಭಾ ಯಾತ್ರೆ ಪಟ್ಟಣದ ಕೆಂಪೇಗೌಡ ವೃತ್ತ, ಬಸವೇಶ್ವರ ವೃತ್ತದ ಮೂಲಕ ಪಟ್ಟಣದ ಡಾ. ಶಿವಕುಮಾರ ಸ್ವಾಮೀಜಿ ಕಲ್ಯಾಣ ಮಂಟಪಕ್ಕೆ ಆಗಮಿಸಿ ಪೂಜ್ಯ ಶ್ರೀ ಅರ್ಜುನ ಅವಧೂತ ಗುರು ಮಹಾರಾಜರು ಕಾಲ್ನಡಿಗೆಯಲ್ಲಿ ಶೋಭಾ ಯಾತ್ರೆಯಲ್ಲಿ ಪಾದಯಾತ್ರೆ ಮೂಲಕ ಭಕ್ತರಿಗೆ ಆರ್ಶಿವಾದ ಮಾಡಿದರು.

# ಉಪನ್ಯಾಸಕ ಹುದ್ದೆ ಫಲಿತಾಂಶ ಪ್ರಕಟ

ಹಾಸನ: 2025-26ನೇ ಶೈಕ್ಷಣಿಕ ಸಾಲಿಗೆ ವಿವಿಧ ವಸತಿ ಶಾಲೆ/ಮೌಲಾನಾ ಆಜಾದ್ ಮಾದರಿ ಶಾಲೆ/ ವಸತಿ ಕಾಲೇಜುಗಳಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕರು/ಉಪನ್ಯಾಸಕರ ಹುದ್ದೆಗೆ ನಡೆದ ಪರೀಕ್ಷೆ ಫಲಿತಾಂಶ ಪ್ರಕಟವಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಸಾಮಾನ್ಯ ಪರೀಕ್ಷೆಯನ್ನು ನಡೆಸಲಾಗಿದ್ದು, ಫಲಿತಾಂಶದ 1:2 ಪಟ್ಟಿ ಬಿಡುಗಡೆಯಾಗಿದೆ. ನಗರದ ಆಕಾಶವಾಣಿ ಹಿಂಭಾಗದ ಮೌಲಾನಾ ಆಜಾದ್ ಭವನ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿ ಇಲ್ಲಿಗೆ ಸಂಪರ್ಕಿಸಲು ತಿಳಿಸಿದೆ. ಮಾಹಿತಿಗೆ 08172-268373 ಇಲ್ಲಿಗೆ ಸಂಪರ್ಕಿಸಬಹುದು.

# ಕಾಯಕ ತತ್ವ ಪಾಲಿಸಲು ಶ್ರೀಗಳ ಸಲಹೆ

## ಆಲೂರಿನಲ್ಲಿ ಅದ್ದೂರಿ ಬಸವ ಜಯಂತಿ | ಮೆರವಣಿಗೆಗೆ ಸಂಸದರ ಸಾಥ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ವಿಶ್ವಗುರು ಬಸವಣ್ಣ ಅವರು ಹಾಕಿಕೊಟ್ಟ ಕಾಯಕ ತತ್ವವನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಶ್ರೀಮದ್ ರಂಭಾಪುರಿ ವೀರ ಸಿಂಹಾಸನ ಶಾಖಾ ಶ್ರೀ ಸಂಸ್ಥಾನ ಹಿರೇಮಠದ ಪೀಠಾಧ್ಯಕ್ಷ ಶ್ರೀ ಸದಾಶಿವ ಸ್ವಾಮೀಜಿ ಹೇಳಿದರು.

ತಾಲ್ಲೂಕು ವೀರಶೈವ ಲಿಂಗಾಯತ ಸಂಘ ಹಾಗು ಅಖಿಲ ಭಾರತ ವೀರಶೈವ ಮಹಾಸಭೆ ವತಿಯಿಂದ ಬುಧವಾರ ಪಟ್ಟಣದ ಬಸವೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಹಾಗು ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿ, ಪ್ರತಿಭಾ ಪುರಸ್ಕಾರಗಳು ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಿಸುತ್ತವೆ. ಇತರೆ ವಿದ್ಯಾರ್ಥಿಗಳಿಗೆ ಇದು ಪ್ರೇರಣೆಯಾಗುತ್ತದೆ. ಪ್ರತಿಭಾ ಪುರಸ್ಕಾರ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಬಾರದು. ಕಲಿಕೆ ಮಾತ್ರವಲ್ಲದೆ ಇತರ ಚಟುವಟಿಕೆಗಳಲ್ಲಿ ಪ್ರತಿಭೆ ಹೊಂದಿರುವ ಮಕ್ಕಳನ್ನು ಗುರುತಿಸಿ



ಗೌರವಿಸುವ ಕೆಲಸ ಆಗಬೇಕು ಎಂದರು.

ಕಾಯಕ ತತ್ವದ ಮೂಲಕ ಸಮ ಸಮಾಜ ನಿರ್ಮಿಸಿದ ಮಹಾನ್ ಜ್ಞಾನಿ ಬಸವಣ್ಣ. 12ನೇ ಶತಮಾನದಲ್ಲಿ ವಚನಗಳ ಮೂಲಕ ಸಮಾಜವನ್ನು ತಿದ್ದಿದ ಬಸವಣ್ಣನವರು ಅನುಭವ ಮಂಟಪ ನಿರ್ಮಿಸಿ ಸಮಾನತೆ ಬಗ್ಗೆ ವಿಶ್ವಕ್ಕೆ ಮಾದರಿಯಾದರು. ಅವರ ತತ್ವ, ವಚನಗಳು ಸಾರ್ವಕಾಲಿಕ ಮೌಲ್ಯಗಳಾಗಿದ್ದು, ಅದನ್ನು ಪ್ರತಿಯೊಬ್ಬರೂ ಅನುಸರಿಸಬೇಕು ಎಂದು ತಿಳಿಸಿದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಬಸವಣ್ಣ ಜಾತಿ ರಹಿತ ಸಮಾಜವನ್ನು ಬಯಸಿದ ವ್ಯಕ್ತಿ. ಮೇಲು ಕೀಳು ತಾರತಮ್ಯ ಕಿತ್ತೊಗೆದು ಸಾಮಾಜಿಕ ಸಮಾನತೆ ಪ್ರತಿಪಾದಿಸಿದ ಶ್ರೇಷ್ಠ ದಾರ್ಶನಿಕ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, 12ನೇ ಶತಮಾನದಲ್ಲಿಯೇ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದರ ಜೊತೆಗೆ ಎಲ್ಲರನ್ನೂ ಒಂದುಗೂಡಿಸುವ ಕಾರ್ಯ ನಡೆದಿದೆ. ಆದರೆ ಅದು ಇವತ್ತಿನವರೆಗೂ ಬಗೆಹರಿಯದೆ ಜಾತಿ, ಧರ್ಮ, ಘರ್ಷಣೆಗಳು ಪ್ರತಿದಿನ ನಡೆಯುತ್ತಿರುವುದು ಬೇಸರದ ಸಂಗತಿ. ಮಾನವನನ್ನು ಮಾನವನನ್ನಾಗಿ ಕಾಣದ ಧರ್ಮ ಯಾವುದು. ಬಸವಣ್ಣನವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆಯಬೇಕೆಂಬ ಉದ್ದೇಶದಿಂದ ಅವರ ತತ್ವಾದರ್ಶ ಪರಿಚಯಿಸುವ ಕೆಲಸ ಆಗಬೇಕು ಎಂದರು.

ಧರ್ಮರಾಜೇಂದ್ರ ಸ್ವಾಮೀಜಿ, ತಹಶೀಲ್ದಾರ್ ಮಲ್ಲಿಕಾರ್ಜುನ್, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣೇಗೌಡ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್. ಮಂಜೇಗೌಡ, ಬಿಜೆಪಿ ಅಧ್ಯಕ್ಷ ಉಮಾರವಿ ಪ್ರಕಾಶ್, ತಾಲ್ಲೂಕು ವೀರಶೈವ ಸಂಘದ ಅಧ್ಯಕ್ಷ ರೇಣುಕ ಪ್ರಸಾದ್, ಉಪಾಧ್ಯಕ್ಷ ಡಿ.ಎಸ್. ಜಯಣ್ಣ, ಕಾರ್ಯದರ್ಶಿ ಶಿವಮೂರ್ತಿ, ಸಹಕಾರ್ಯದರ್ಶಿ ಡಾ. ಜಯರಾಜ್, ಖಜಾಂಚಿ ಟೀಕರಾಜು, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಅಜಿತ್ ಚಿಕ್ಕಕಣಗಾಲು, ಉಪಾಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಚೇತನ್ ಮಗ್ಗೆ, ಖಜಾಂಚಿ ಕುಮಾರ್ ಹಾಗೂ ಇತರರಿದ್ದರು.

# ಮನೆ ಹೆಂಚು ತೆಗೆದು ಚಿನ್ನಾಭರಣ ಕಳವು

ಹೊಳೆನರಸೀಪುರ: ಹಾಡಹಗಲೇ ಮನೆಯ ಹೆಂಚು ತೆಗೆದು ಒಳನುಗ್ಗಿರುವ ಕಳ್ಳರು ನಗದು ಸೇರಿ 14.38 ಲಕ್ಷ ರೂ. ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣ ಕದ್ದಿರುವ ಘಟನೆ ತಾಲ್ಲೂಕಿನ ತಾತನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೇಣುಕೇಶ ಅವರು ಮಂಗಳವಾರ ಬೆಳಿಗ್ಗೆ 9.30ಕ್ಕೆ ಮನೆಗೆ ಬೀಗ ಹಾಕಿ ಕಾರ್ಯನಿಮಿತ್ತ ಹೊಳೆನರಸೀಪುರಕ್ಕೆ ತೆರಳಿದ್ದರು. ಸಂಜೆ 5 ಗಂಟೆಗೆ ಬಂದು ನೋಡಿದಾಗ ಮನೆಯ ಹೆಂಚುಗಳನ್ನು ಒಡೆದಿರುವುದು ಗೊತ್ತಾಗಿದೆ. ಹೆಂಚು ಹಾಗೂ ರಿಪೀಟ್ ಪಟ್ಟಿ ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 12.18 ಲಕ್ಷ ರೂ. ಮೌಲ್ಯದ 203 ಗ್ರಾಂ ತೂಕದ ಚಿನ್ನಾಭರಣ, 1.40 ಲಕ್ಷ ರೂ. ಮೌಲ್ಯದ ಬೆಳ್ಳಿ ಆಭರಣ ಹಾಗು 80 ಸಾವಿರ ರೂ. ನಗದು ಕದ್ದು ಪರಾರಿಯಾಗಿದ್ದಾರೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಾವು ಭಯವಲ್ಲ-ಬದಲಾವಣೆ

**- ವಿಶ್ವಾಸ್ ಡಿ. ಗೌಡ,**
**ಸಕಲೇಶಪುರ, 9743636831**

ಕನ್ನಡ ಪೋಸ್ಟ್ ವಿಶೇಷ

ಸಾವು ಎಂದರೆ ಎಲ್ಲರಿಗೂ ಭಯ. ಆದರೆ ಹುಟ್ಟು ಮತ್ತು ಸಾವು ಸೃಷ್ಟಿಯ ನಿಯಮಗಳು. ಇವು ಬ್ರಹ್ಮಾಂಡದ ಸಮತೋಲನಕ್ಕೆ ಬಹಳ ಮುಖ್ಯ. ಸಾವು ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ಈ ಕಥೆ ಒಂದು ಉತ್ತಮ ಉದಾಹರಣೆ.

ಒಮ್ಮೆ ಒಬ್ಬ ರಾಜನು ತನ್ನ ರಾಜ್ಯದ ಹೊರಗೆ ಮರದ ಕೆಳಗೆ ಕುಳಿತಿದ್ದ ಋಷಿಯ ಬಳಿ ಹೋದ. ಸ್ವಾಮಿ! ಅಮರತ್ವ ನೀಡುವ ಯಾವುದೇ ಮೂಲಿಕೆ ಅಥವಾ ಔಷಧಿ ಇದೆಯೇ ದಯವಿಟ್ಟು ಹೇಳಿ ಎಂದು ಕೇಳಿದ.

ಋಷಿ, ಓ ರಾಜ! ನಿನ್ನ ಮುಂದೆ ಕಾಣುವ ಎರಡು ಪರ್ವತಗಳನ್ನು ದಾಟಿ ಹೋಗು. ಅಲ್ಲಿ ಒಂದು ಸರೋವರವಿದೆ. ಅದರ ನೀರನ್ನು ಕುಡಿದರೆ ನೀನು ಅಮರನಾಗುವೆ ಎಂದರು.

ರಾಜನು ಎರಡು ಪರ್ವತಗಳನ್ನು ದಾಟಿ ಸರೋವರವನ್ನು ತಲುಪಿದ. ನೀರು ಕುಡಿಯಲು ಹೋಗುತ್ತಿದ್ದಾಗ, ನೋವಿನಿಂದ ನರಳುತ್ತಿದ್ದ ಒಬ್ಬ ದುರ್ಬಲ ವ್ಯಕ್ತಿಯ ಧ್ವನಿ ಕೇಳಿಸಿತು. ಧ್ವನಿ ಬಂದ ಕಡೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ನೋವಿನಿಂದ ಮಲಗಿದ್ದನು.

ರಾಜನು ಕಾರಣ ಕೇಳಿದಾಗ, ಆ ವ್ಯಕ್ತಿ, ನಾನು ಈ ಸರೋವರದ ನೀರನ್ನು ಕುಡಿದು ಅಮರನಾದೆ. ನನಗೆ ನೂರು ವರ್ಷ ತುಂಬಿದಾಗ ನನ್ನ ಮಗ ನನ್ನನ್ನು ಮನೆಯಿಂದ ಹೊರಹಾಕಿದ. ನಾನು ಕಳೆದ ಐವತ್ತು ವರ್ಷಗಳಿಂದ ಇಲ್ಲಿ ಮಲಗಿದ್ದೇನೆ, ನನ್ನನ್ನು ನೋಡಿಕೊಳ್ಳಲು ಯಾರೂ ಇಲ್ಲ. ನನ್ನ ಮಗ ತೀರಿಹೋಗಿದ್ದಾನೆ. ನನ್ನ ಮೊಮ್ಮಕ್ಕಳು ಈಗ ವೃದ್ಧರಾಗಿದ್ದಾರೆ. ನಾನು ತಿನ್ನುವುದು, ಕುಡಿಯುವುದನ್ನು ನಿಲ್ಲಿಸಿದ್ದೇನೆ. ಆದರೂ ನಾನು ಇನ್ನೂ ಬದುಕಿದ್ದೇನೆ ಎಂದು ಹೇಳಿದ.

ರಾಜನು ಆಲೋಚಿಸಿದ, ವೃದ್ಧಾಪ್ಯದೊಂದಿಗೆ ಅಮರತ್ವದಿಂದ ಏನು ಪ್ರಯೋಜನ. ನಾನು ಯೌವನದ ಜೊತೆಗೆ ಅಮರತ್ವವನ್ನು ಪಡೆದರೆ ಹೇಗೆ. ಅವನು ಪರಿಹಾರಕ್ಕಾಗಿ ಋಷಿಯ ಬಳಿಗೆ ಹಿಂತಿರುಗಿ ದಯವಿಟ್ಟು ಅಮರತ್ವ ಮತ್ತು ಯೌವನ ಎರಡನ್ನೂ ಹೇಗೆ ಪಡೆಯುವುದು ಎಂದು ಹೇಳಿ ಎಂದು ಕೇಳಿದ.



ಋಷಿ, ಸರೋವರವನ್ನು ದಾಟಿದ ನಂತರ, ಇನ್ನೊಂದು ಪರ್ವತ ಸಿಗುತ್ತದೆ. ಅದನ್ನು ದಾಟಿ, ಹಳದಿ ಹಣ್ಣುಗಳಿಂದ ತುಂಬಿದ ಮರವೊಂದನ್ನು ಕಾಣುವೆ. ಅದರಲ್ಲಿ ಒಂದನ್ನು ತಿಂದರೆ, ನಿನಗೆ ಅಮರತ್ವ ಮತ್ತು ಯೌವನ ಎರಡೂ ಸಿಗುತ್ತವೆ ಎಂದರು. ರಾಜನು ಇನ್ನೊಂದು ಪರ್ವತವನ್ನು ದಾಟಿ, ಹಳದಿ ಹಣ್ಣುಗಳಿಂದ ತುಂಬಿದ ಮರವನ್ನು ಕಂಡನು. ಒಂದು ಹಣ್ಣನ್ನು ಕಿತ್ತು ತಿನ್ನಲು ಹೋಗುತ್ತಿದ್ದಾಗ, ಜೋರಾದ ವಾದ ಮತ್ತು ಜಗಳ ಕೇಳಿಸಿತು. ಇಷ್ಟು ದೂರದಲ್ಲಿ ಯಾರು ಜಗಳವಾಡುತ್ತಿರಬಹುದು ಎಂದು ರಾಜನಿಗೆ ಆಶ್ಚರ್ಯವಾಯಿತು.

ಅವನು ನಾಲ್ಕು ಯುವಕರು ಜೋರಾಗಿ ವಾದ ಮಾಡುತ್ತಿರುವುದನ್ನು ಕಂಡನು. ರಾಜನು ಯಾಕೆ ಜಗಳವಾಡುತ್ತಿದ್ದೀರಿ ಎಂದು ಕೇಳಿದ. ಅವರಲ್ಲಿ ಒಬ್ಬನು, ನನಗೆ 250 ವರ್ಷ, ಮತ್ತು ನನ್ನ ಬಲಭಾಗದಲ್ಲಿರುವವನಿಗೆ 300 ವರ್ಷ. ಅವನು ನನ್ನ ಆಸ್ತಿಯ ಪಾಲನ್ನು ನನಗೆ ಕೊಡುತ್ತಿಲ್ಲ ಎಂದು ಹೇಳಿದ.

ರಾಜನು ಬಲಭಾಗದಲ್ಲಿದ್ದ ವ್ಯಕ್ತಿಯನ್ನು ಕೇಳಿದಾಗ, ನನ್ನ ತಂದೆ, ಅವರಿಗೆ 350 ವರ್ಷ. ಅವರು ಇನ್ನೂ ಬದುಕಿದ್ದಾರೆ ಮತ್ತು ನನಗೆ ನನ್ನ ಪಾಲನ್ನು ಕೊಟ್ಟಿಲ್ಲ. ನಾನು ಹೇಗೆ ನನ್ನ ಮಗನಿಗೆ ಕೊಡಲಿ ಎಂದನು.

ಆ ವ್ಯಕ್ತಿ ತನ್ನ 400 ವರ್ಷದ ತಂದೆಯನ್ನು ತೋರಿಸಿದ, ಅವರೂ ಅದೇ ದೂರು ಹೇಳಿದ. ಅವರೆಲ್ಲರೂ ರಾಜನಿಗೆ ತಮ್ಮ ಆಸ್ತಿಗಾಗಿ ನಡೆಯುವ ಈ ಅಂತ್ಯವಿಲ್ಲದ ಜಗಳದಿಂದಾಗಿ ಗ್ರಾಮಸ್ಥರು ತಮ್ಮನ್ನು ಹಳ್ಳಿಯಿಂದ ಹೊರಹಾಕಿದ್ದಾರೆ ಎಂದು ಹೇಳಿದರು. ಆಘಾತಕ್ಕೊಳಗಾದ ರಾಜನು ಋಷಿಯ ಬಳಿಗೆ ಹಿಂದಿರುಗಿ, ಸಾವಿನ ಮಹತ್ವವನ್ನು ನನಗೆ ಕಲಿಸಿದ್ದಕ್ಕಾಗಿ ಧನ್ಯವಾದಗಳು ಎಂದನು.

ಆಗ ಋಷಿ ಹೇಳಿದರು

★ಸಾವು ಅಸ್ತಿತ್ವದಲ್ಲಿರುವುದರಿಂದಲೇ, ಜಗತ್ತಿನಲ್ಲಿ ಪ್ರೀತಿ ಇದೆ.

★ ಸಾವನ್ನು ತಪ್ಪಿಸಲು ಪ್ರಯತ್ನಿಸುವ ಬದಲು ಪ್ರತಿ ದಿನ ಮತ್ತು ಪ್ರತಿ ಕ್ಷಣವನ್ನು ಸಂತೋಷದಿಂದ ಬದುಕಿ

★ ನಿಮ್ಮನ್ನು ಬದಲಾಯಿಸಿಕೊಳ್ಳಿ, ಜಗತ್ತು ಬದಲಾಗುತ್ತದೆ.

ಇದರಿಂದ ನೀವು ಜೀವನದ ಪ್ರತಿಯೊಂದು ಕ್ಷಣವನ್ನೂ ಅರ್ಥಪೂರ್ಣವಾಗಿ ಹೇಗೆ ಬದುಕಬಹುದು ಎಂಬುದನ್ನು ಕಲಿಯಬಹುದು:

1. ದೇವರ ನಾಮವನ್ನು ಜಪಿಸುವಾಗ ಸ್ನಾನ ಮಾಡಿದರೆ, ಅದು ಪವಿತ್ರ ಸ್ನಾನವಾಗುತ್ತದೆ.
2. ಊಟ ಮಾಡುವಾಗ ಜಪಿಸಿದರೆ, ಆಹಾರವು ಪವಿತ್ರ ಪ್ರಸಾದವಾಗುತ್ತದೆ.
3. ನಡೆಯುವಾಗ ಜಪಿಸಿದರೆ, ಅದು ಯಾತ್ರೆಯಾಗುತ್ತದೆ.
4. ಅಡುಗೆ ಮಾಡುವಾಗ ಜಪಿಸಿದರೆ, ಆಹಾರವು ದೈವಿಕವಾಗುತ್ತದೆ.
5. ಮಲಗುವ ಮೊದಲು ಜಪಿಸಿದರೆ, ಅದು ಧ್ಯಾನದ ನಿದ್ರೆಯಾಗುತ್ತದೆ.
6. ಕೆಲಸ ಮಾಡುವಾಗ ಜಪಿಸಿದರೆ, ಅದು ಭಕ್ತಿಯಾಗುತ್ತದೆ.
7. ಮನೆಯಲ್ಲಿ ಜಪಿಸಿದರೆ, ಅದು ದೇವಾಲಯವಾಗಿ ಬದಲಾಗುತ್ತದೆ.

ಜ್ಞಾನದಿಂದ ಬದುಕಿ, ಚೆನ್ನಾಗಿ ಬದುಕಿ. ಉತ್ತಮ ಜೀವನ ನಿಮ್ಮದಾಗಲಿ.

# ಇತಿಹಾಸದಲ್ಲಿ ಈ ದಿನ

## ಜೂನ್ -12

1975: ಅಲಹಾಬಾದ್ ಹೈಕೋರ್ಟ್ ಪ್ರಧಾನಿ ಇಂದಿರಾ ಗಾಂಧಿಯ ಚುನಾವಣೆಯನ್ನು ರದ್ದುಪಡಿಸಿತು. ಇದು ಭಾರತದ ರಾಜಕೀಯ ಇತಿಹಾಸದಲ್ಲಿ ತೀವ್ರ ಸಂಚಲನ ಸೃಷ್ಟಿಸಿತು. ಅದೇ ಕಾರಣದಿಂದ ಕೆಲ ದಿನಗಳಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಯಿತು.

1947: ಲಾರ್ಡ್ ಮೌಂಟ್ ಬ್ಯಾಟನ್ ಭಾರತ ವಿಭಜನೆ ಸಂಬಂಧ ಮುಂಬೈಗೆ ಭೇಟಿ ನೀಡಿದರು. ಇದು ವಿಭಜನೆಗೆ ಸಂಬಂಧಿಸಿದ ಅಂತಿಮ ಸಮಾಲೋಚನೆಗಳಲ್ಲಿ ಒಂದು.

**ಜನನ**

1897: ಜಮ್ನಾದಾಸ್ ದೌಲತ್ ರಾಮ್ ಕೃಪಲಾನಿ. ಭಾರತೀಯ ಸ್ವಾತಂತ್ರ್ಯ ಹೋರಾಟಗಾರ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಲೇಖಕ.

1903: ಆಂಟೋನಿ ಡಿ ಮೆಲ್ಲೋ. ಕ್ರಿಕೆಟ್ ಆಡಳಿತಗಾರ ಮತ್ತು ಬೋರ್ಡ್ ಆಫ್ ಕಂಟ್ರೋಲ್ ಫಾರ್ ಕ್ರಿಕೆಟ್ ಇನ್ ಇಂಡಿಯಾ ಸ್ಥಾಪಕರಲ್ಲಿ ಒಬ್ಬ.

**ಮರಣ**

2013: ಋತುಪರ್ಣೋ ಘೋಷ್. ಪ್ರಸಿದ್ಧ ಭಾರತೀಯ ಚಿತ್ರ ನಿರ್ದೇಶಕ, ಲೇಖಕ ಮತ್ತು ನಟ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248